# ದೇಶಾದ್ಯಂತ ಗ್ರಾಹಕರ ಬೇಡಿಕೆ ಮತ್ತು ಸುರಕ್ಷತೆಗೆ ಫ್ಲಿಪ್ ಕಾರ್ಟ್ ಗ್ರಾಸರಿ ಮೂಲಸೌಕರ್ಯ ವಿಸ್ತರಣೆ

- *ಲಕ್ನೋ, ಪುಣೆ, ಅಹ್ಮದಾಬಾದ್, ದೆಹಲಿ, ಬೆಂಗಳೂರು, ಚೆನ್ನೈ, ಮುಂಬೈ, ಹೈದ್ರಾಬಾದ್, ಕೋಲ್ಕತ್ತಾ ಮತ್ತು ಪಾಟ್ನಾದ ಗ್ರಾಸರಿ ಫುಲ್ ಫಿಲ್ಮೆಂಟ್ ಕೇಂದ್ರಗಳ ಸಾಮರ್ಥ್ಯ ಹೆಚ್ಚಳ ಮಾಡಿದ ಫ್ಲಿಪ್ ಕಾರ್ಟ್*
- *ಈ ತ್ರೈಮಾಸಿಕದಲ್ಲಿ ದೆಹಲಿ, ಚೆನ್ನೈ, ಕೊಯಮತ್ತೂರು, ಹೈದ್ರಾಬಾದ್ ಮತ್ತು ಕೋಲ್ಕತ್ತಾದ ಗ್ರಾಸರಿ ಫುಲ್ ಫಿಲ್ಮೆಂಟ್ ಕೇಂದ್ರಗಳ ಸಾಮರ್ಥ್ಯವನ್ನು 8 ಲಕ್ಷ ಚದರಡಿವರೆಗೆ ಹೆಚ್ಚಳ ಮಾಡುವ ಯೋಜನೆ*
- *ಈ ಹೆಚ್ಚುವರಿ ಗ್ರಾಸರಿ ಫುಲ್ ಫಿಲ್ಮೆಂಟ್ ಕೇಂದ್ರಗಳ ಸಾಮರ್ಥ್ಯದಿಂದ ಪ್ರತಿದಿನ 73,000 ಕ್ಕೂ ಹೆಚ್ಚು ಗ್ರಾಸರಿ ಆರ್ಡರ್ ಗಳನ್ನು ಪೂರೈಸಲು ಸಾಧ್ಯವಾಗುತ್ತದೆ*

ಬೆಂಗಳೂರು, ಮೇ 11, 2021: ಭಾರತದ ಸ್ವದೇಶಿ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ದೇಶಾದ್ಯಂತ ತನ್ನ ಗ್ರಾಸರಿ ಪೂರೈಕೆ ಜಾಲ ಮೂಲಸೌಕರ್ಯವನ್ನು ಮತ್ತಷ್ಟು ಬಲಗೊಳಿಸುತ್ತಿದೆ. ಇದರ ಮೂಲಕ ಫ್ಲಿಪ್ ಕಾರ್ಟ್ ತನ್ನ ಗ್ರಾಹಕರಿಗೆ ಸುರಕ್ಷಿತವಾದ ಮತ್ತು ತಡೆರಹಿತವಾದ ದೈನಂದಿನ ಅಗತ್ಯ ವಸ್ತುಗಳನ್ನು ತ್ವರಿತವಾಗಿ ಮತ್ತು ಸಂಪರ್ಕರಹಿತವಾಗಿ ಮನೆ ಬಾಗಿಲಿಗೆ ತಲುಪಿಸುವ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದೆ.

ಈ ಪ್ರಯತ್ನದ ಮೂಲಕ ಫ್ಲಿಪ್ ಕಾರ್ಟ್ ಮುಂದಿನ ಮೂರು ತಿಂಗಳಲ್ಲಿ ಸುಮಾರು 8 ಲಕ್ಷ ಚದರಡಿಗೂ ಅಧಿಕ ವಿಸ್ತೀರ್ಣದ ಹೊಸ ಪೂರೈಕೆ ಕೇಂದ್ರಗಳನ್ನು ಸ್ಥಾಪಿಸಲಿದೆ ಮತ್ತು ತನ್ನ ಗ್ರಾಸರಿ ವ್ಯವಹಾರದ ಪೂರೈಕೆ ಜಾಲದ ಮೂಲಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲಿದೆ. ಈ ಹೆಚ್ಚುವರಿ ಮೂಲಸೌಕರ್ಯದಿಂದ ಇನ್ನೂ ಹೆಚ್ಚು ಗ್ರಾಹಕರು ಸುಲಭವಾಗಿ ಆನ್ ಲೈನ್ ಮೂಲಕ ಗ್ರಾಸರಿ ಶಾಪಿಂಗ್ ಅನ್ನು ಮಾಡಬಹುದಾಗಿದೆ.

200+ ವಿಭಾಗಗಳ ಗೃಹಬಳಕೆಯ ಉತ್ಪನ್ನಗಳು, ಸ್ಟಾಪಲ್ಸ್, ಸ್ನ್ಯಾಕ್ಸ್ & ಬೇವರೀಜಸ್, ಕಾನ್ಫೆಕ್ಷನರಿ, ಪರ್ಸನಲ್ ಕೇರ್ ಮತ್ತು ಇನ್ನೂ ಅಧಿಕ ಉತ್ಪನ್ನಗಳು ಸೇರಿದಂತೆ ಫ್ಲಿಪ್ ಕಾರ್ಟ್ ಗ್ರಾಸರಿ 7000 ಕ್ಕೂ ಅಧಿಕ ಉತ್ಪನ್ನಗಳನ್ನು ಹೊಂದಿದೆ. ಫ್ಲಿಪ್ ಕಾರ್ಟ್ ಗ್ರಾಸರಿಯು ಗ್ರಾಸರಿ ಖರೀದಿಗೆ ವಾಯ್ಸ್ ಆಧಾರಿತ ಶಾಪಿಂಗ್ ಸೌಲಭ್ಯ, ಕ್ರೆಡಿಟ್ ಅವಕಾಶ ಮತ್ತು ಓಪನ್ ಬಾಕ್ಸ್ ಡೆಲಿವರಿ ಅವಕಾಶವನ್ನು ತನ್ನ ಗ್ರಾಹಕರಿಗೆ ಒದಗಿಸುತ್ತಿದೆ.

ಪ್ರಸ್ತುತದ ಗ್ರಾಸರಿ ಫುಲ್ ಫಿಲ್ಮೆಂಟ್ ಸೆಂಟರ್ ಜಾಲವು ದೆಹಲಿ, ಮುಂಬೈ, ಬೆಂಗಳೂರು, ಚೆನ್ನೈ ಮತ್ತು ಹೈದ್ರಾಬಾದ್ ಸೇರಿ ಇನ್ನಿತರೆ ನಗರಗಳಲ್ಲಿ ಸಕ್ರಿಯವಾಗಿದೆ. ಇವುಗಳ ಮೂಲಕ ಫ್ಲಿಪ್ ಕಾರ್ಟ್ ಪ್ರತಿದಿನ 64,000 ಕ್ಕೂ ಅಧಿಕ ಆರ್ಡರ್ ಗಳ ಗ್ರಾಹಕರಿಗೆ ತಲುಪಿಸುತ್ತಿದೆ. ಇದರಿಂದ ಸಾವಿರಾರು ಜನರಿಗೆ ನೇರ ಮತ್ತು ಪರೋಕ್ಷ ಕೆಲಸ ಸಿಕ್ಕಿದೆ ಮತ್ತು ಉದ್ಯೋಗಗಳ ಸೃಷ್ಟಿಯಾಗಿ, ಅವರ ಆರ್ಥಿಕ ಸ್ಥಿತಿ ಉತ್ತಮವಾಗುವಂತಾಗಿದೆ. ಫ್ಲಿಪ್ ಕಾರ್ಟ್ ಗ್ರಾಸರಿ ಬ್ಯುಸಿನೆಸ್ ಸುಸ್ಥಿರವಾದ ಪ್ರಗತಿಯನ್ನು ಕಾಣುವಂತೆ ಮಾಡುತ್ತದೆ ಹಾಗೂ ಸ್ಥಳೀಯ ಆಹಾರ ಸಂಸ್ಕರಣೆ ಉದ್ಯಮದ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ. ಇದರ ಪರಿಣಾಮ ಭಾರತೀಯ ಕೃಷಿ, ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಬೆಂಬಲ ದೊರತಂತಾಗಿದೆ.

ಫ್ಲಿಪ್ ಕಾರ್ಟ್ ಗ್ರಾಸರಿಯ ಉಪಾಧ್ಯಕ್ಷರಾದ ಸ್ಮೃತಿ ರವಿಚಂದ್ರನ್ ಅವರು ಈ ಬಗ್ಗೆ ಮಾತನಾಡಿ, ``ಇಂತಹ ಸವಾಲಿನ ಸಂದರ್ಭಗಳಲ್ಲಿ ಇ-ಕಾಮರ್ಸ್ ಉತ್ಪನ್ನಗಳ ಖರೀದಿಗೆ ಸುರಕ್ಷಿತವಾದ ಮಾರ್ಗವಾಗಿ ಪರಿಣಮಿಸಿದೆ. ಫ್ಲಿಪ್ ಕಾರ್ಟ್ ಗ್ರೂಪ್ ನ ಪ್ರಮುಖ ಆದ್ಯತೆಯೆಂದರೆ ಗ್ರಾಹಕರ ಸುರಕ್ಷತೆ ಮತ್ತು ನಮ್ಮ ಹೊಸ ಗ್ರಾಸರಿ ಪೂರೈಕೆ ಜಾಲದ ಮೂಲಸೌಕರ್ಯವು ದೇಶದ ಇನ್ನೂ ಹೆಚ್ಚಿನ ಗ್ರಾಹಕರು ತಮ್ಮ ಅಗತ್ಯ ಉತ್ಪನ್ನಗಳನ್ನು ತಡೆರಹಿತವಾಗಿ ಆರ್ಡರ್ ಮಾಡಿ ಸಂಪರ್ಕರಹಿತವಾಗಿ ಡೆಲಿವರಿ ಪಡೆಯಲು ನೆರವಾಗುತ್ತದೆ. ಈ ದಿಸೆಯಲ್ಲಿ ನಾವು ದೇಶಾದ್ಯಂತ ದಾಸ್ತಾನು ಲಭ್ಯವಾಗುವಂತೆ ಮಾಡಲು ವಿವಿಧ ಬ್ರ್ಯಾಂಡ್ ಗಳು ಮತ್ತು ಮಾರ್ಕೆಟ್ ಪ್ಲೇಸ್ ಗಳ ಜತೆಯಲ್ಲಿ ನಿರಂತರ ಸಂಪರ್ಕದಲ್ಲಿದ್ದೇವೆ" ಎಂದು ತಿಳಿಸಿದರು.

ಕಳೆದ ತಿಂಗಳು ಫ್ಲಿಪ್ ಕಾರ್ಟ್ ತನ್ನ ಹೈಪರ್ ಲೋಕಲ್ ಸರ್ವೀಸ್ ಆದ ಫ್ಲಿಪ್ ಕಾರ್ಟ್ ಕ್ವಿಕ್ ಅನ್ನು ದೆಹಲಿ, ಗುರುಗಾಂವ್, ಗಾಝಿಯಾಬಾದ್, ನೋಯ್ಡಾ, ಹೈದ್ರಾಬಾದ್ ಮತ್ತು ಪುಣೆಯಲ್ಲಿ ಆರಂಭಿಸಿದೆ. ಇದರ ಉದ್ದೇಶವೆಂದರೆ ಗ್ರಾಹಕರು ಆರ್ಡರ್ ಮಾಡಿದ ಕೇವಲ ೯೦ ನಿಮಿಷಗಳಲ್ಲಿ ಹಣ್ಣು ಮತ್ತು ತರಕಾರಿ ಸೇರಿದಂತೆ ಇನ್ನಿತರೆ ದೈನಂದಿನ ಅಗತ್ಯ ವಸ್ತುಗಳನ್ನು ಡೆಲಿವರಿ ಮಾಡುವುದಾಗಿದೆ. ಫ್ಲಿಪ್ ಕಾರ್ಟ್ ನ ಬೆಳವಣಿಗೆಯ ಈ ಕಾರ್ಯಸೂಚಿಯ ಪ್ರಮುಖ ಆಧಾರ ಸ್ತಂಭವೆಂದರೆ ಕೃಷಿ ಉತ್ಪನ್ನ ಪೂರೈಕೆ ಜಾಲವಾಗಿದೆ. ಈ ಜಾಲವನ್ನು ನಾವು ಸದೃಢಗೊಳಿಸುತ್ತಿದ್ದೇವೆ. ಇದರ ಮೂಲಕ ನಾವು ರೈತರ ಜೀವನೋಪಾಯವನ್ನು ಸುಧಾರಣೆ ಮಾಡುತ್ತಿದ್ದೇವೆ ಮತ್ತು ಸ್ಥಳೀಯ ಆಹಾರ ಸಂಸ್ಕರಣೆ ಉದ್ಯಮಗಳಿಗೆ ವಿಸ್ತರಿತ ಮಾರುಕಟ್ಟೆ ಜಾಲವನ್ನು ಒದಗಿಸುವುದರೊಂದಿಗೆ ಅವುಗಳ ಬೆಳವಣಿಗೆ ಸಹಕಾರಿಯಾಗುತ್ತಿದ್ದೇವೆ. ಫ್ಲಿಪ್ ಕಾರ್ಟ್ ನಲ್ಲಿ ಗ್ರಾಹಕರು ಮತ್ತು ಸಿಬ್ಬಂದಿಯ ಸುರಕ್ಷತೆ ಮೊದಲ ಆದ್ಯತೆಯಾಗಿದೆ. ಸಿಬ್ಬಂದಿ ಅಥವಾ ಡೆಲಿವರಿ ಪ್ರತಿನಿಧಿಗಳು ಸುರಕ್ಷಿತ ಮತ್ತು ಸ್ಯಾನಿಟೈಸ್ ಮಾಡಲಾದ ಪೂರೈಕೆ ಜಾಲದ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ಉತ್ಪನ್ನಗಳನ್ನು ತಲುಪಿಸುತ್ತಿದ್ದಾರೆ. ದೇಶಾದ್ಯಂತ ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುವ ಮೂಲಕ ಫ್ಲಿಪ್ ಕಾರ್ಟ್ ನ ಸಾವಿರಾರು ಡೆಲಿವರಿ ಹೀರೋಗಳು ಗ್ರಾಹಕರು ಉತ್ಪನ್ನಗಳ ಖರೀದಿಗೆ ಮನೆಯಿಂದ ಹೊರ ಬರುವ ಪ್ರಮಾಣವನ್ನು ಕಡಿಮೆ ಮಾಡುತ್ತಿದ್ದಾರೆ ಮತ್ತು ಗ್ರಾಹಕರ ಮನೆ ಬಾಗಿಲಿಗೇ ಉತ್ಪನ್ನಗಳನ್ನು ತಲುಪಿಸುವ ಮೂಲಕ ಗ್ರಾಹಕರ ಸುರಕ್ಷತೆಗೆ ಕಾರಣರಾಗುತ್ತಿದ್ದಾರೆ. ಇದೇ ವೇಳೆ, ಫ್ಲಿಪ್ ಕಾರ್ಟ್ ಅತ್ಯುತ್ತಮ ಮಾರುಕಟ್ಟೆಯ ವೇದಿಕೆಯನ್ನು ಒದಗಿಸುವುದರೊಂದಿಗೆ ಲಕ್ಷಾಂತರ ಮಾರಾಟಗಾರರು/ಎಂಎಸ್ಎಂಇಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ವ್ಯವಹಾರವನ್ನು ವೃದ್ಧಿಸಿಕೊಳ್ಳಲು ನೆರವಾಗುತ್ತಿದೆ. ಅಲ್ಲದೇ, ಲಕ್ಷಾಂತರ ಉದ್ಯೋಗ ಸೃಷ್ಟಿಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿದೆ. ಕಳೆದ ಹಲವಾರು ತಿಂಗಳಿಂದ ಫ್ಲಿಪ್ ಕಾರ್ಟ್ ನಿರಂತರವಾಗಿ ಸುರಕ್ಷತಾ ಕ್ರಮಗಳನ್ನು ಅನುಸರಿಸುತ್ತಿದೆ ಮತ್ತು ಈ ಮೂಲಕ ಗ್ರಾಹಕರು ಮತ್ತು ಸಿಬ್ಬಂದಿಯ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratise e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services

such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market and now Flipkart Wholesale, the Flipkart Group will continue to steer the transformation of commerce in India through technology.

**For more information, please contact media@flipkart.com**